

ಹಾಗೆಯೇ ಮೂಗಿಗೆ ಧರಿಸುವ ಮೂಗುತಿ ಇಂಗ್ಲಿಷಿನಲ್ಲಿ ಮೂಸ್ ಆಗುತ್ತದೆ. ಮೂಸುವ ಮೂತಿಯನ್ನು ಸದಾ ಅಪ್ಪಿಕೊಂಡಿರುವುದರಿಂದ ಈ ಹೆಸರು ಬಂದಿರಬಹುದೇ? ಆದರೂ ನೋಸ್, ಸ್ಮೆಲ್, ನಾಸಿಕ, ವಾಸನೆ, ಮೂಸು, ಮೂಸ್, ನಸ್ಯ. ಸೀನು, ಸಿಂಬಳ, ಸಿಂಡು, ಉಸಿರು, ಮುಸುಕು, ಮಾಸ್ಕು, ಸ್ನೋರ್... ಎಲ್ಲವೂ ಸಕಾರದಿಂದ ಕೂಡಿ ಪರಸ್ಪರ ಸಹಕಾರದಿಂದಿವೆ. ವಿಘ್ನೇಶ ಉದ್ದ ಮೂಗಿನವನಾದರೂ ಯಾರ ವಿಷಯದಲ್ಲೂ ಮೂಗು ತೂರಿಸಿದ ಕಥೆಗಳಿಲ್ಲ. ಆದರೆ, ಆ ಪಾಟಿ ಉದ್ದದ ಟ್ರಂಕ್ ಮೂಗು ಕಟ್ಟಿಕೊಂಡಾಗ ಅವನೇನು ಮಾಡುತ್ತಿದ್ದ? ನಮಗಾದರೋ ಕಟ್ಟಿದ ಮೂಗಿಗೆ ಆಕ್ಯುಪ್ರೆಶರ್ ಚಿಕಿತ್ಸೆ ಮಾಡಿಕೊಳ್ಳಬಹುದು. ಎಡ ಬಲ ಹೊಳ್ಳೆಗಳನ್ನು ಬೆರಳುಗಳಿಂದ ಒತ್ತಿ ಬಲವಾಗಿ ಸೀನೊಂದನ್ನು ಹೊರದಬ್ಬಿ ಕಟ್ಟನ್ನು ಬಿಡಿಸಿಕೊಳ್ಳಬಹುದು. ಹಾಗೆ ನೋಡಿದರೆ, ಮೂಗೂ ಬಾಯಿಯೂ ಒಂದೇ ಕಡೆ ಇಲ್ಲದ ಗಣಪನಿಗೆ ಮಾಸ್ಕ್ ಧರಿಸುವುದೂ ಕಷ್ಟವೇ. ಇರಲಿ, ಅವನ ಕಷ್ಟ ಅವನಿಗೆ. ನಾವೇನು ಮಾಡೋಣ?

ಗಣೇಶನನ್ನು ಬಿಟ್ಟು ನಮ್ಮ ಲವಲವಿಕೆಯ ದೇವನಾದ ಕೃಷ್ಣನತ್ತ ಬರೋಣ. ಗೋಕುಲದ ಜನ ದನವೆಲ್ಲ ಈತನ ಹಿಂದೆ ಬರಲು ಇವನ ಮೂಗೇ ಕಾರಣ ಎಂದರೆ ಒಪ್ಪುವಿರಾ? ಕೊಳಲನೂದಲು ಮೂಗು ಬೇಕೇ ಬೇಕಲ್ಲವೇ? ಹಾಗಿರುವಾಗ... ಆದರೂ ನಮ್ಮ ಕಿಟ್ಟನಿಗೆ ನೆಗಡಿಯಾದಾಗ ಏನು ಮಾಡುತ್ತಿದ್ದ? ಕೊಳಲು ಪಕ್ಕಕ್ಕಿಟ್ಟು ತಲೆಯ ಗರಿಯನ್ನು ತೆಗೆದು ಮೂಗಿನ ಹೊಳ್ಳೆಗಳ ಮೇಲೆ ಆಡಿಸುತ್ತಿದ್ದ. ಆಗ ನಸ್ಯ ಎಳೆದಂತೆ ಬಲವಾದ ಸೀನುಗಳು ಬಂದು ಕಟ್ಟಿದ ಮೂಗು ಬಿಚ್ಚಿಕೊಳ್ಳುತ್ತಿತ್ತು. ಮತ್ತೆ ಕೊಳಲ ಗಾನ ಹರಿಯುತ್ತಿತ್ತು. ಇಹದ ವಾಸನೆಗಳಿಂದೆಲ್ಲ ಬಿಡಿಸಿಕೊಂಡು ಮತ್ತೆ ಜನ ಮೈಮರೆಯುತ್ತಿತ್ತು. ಹೀಗೆ ಕೃಷ್ಣ ನವಿಲುಗರಿಯನ್ನಾಡಿಸುತ್ತಾ ಒಂದರ ಮೇಲೊಂದು ಸೀನುಗಳನ್ನು ಸೀನುತ್ತಿದ್ದರೆ ಹತ್ತಿರವಿದ್ದ ವಿಜಯನೋ ಮಕರಂದನೋ, ‘ನೋಡು ಕಿಟ್ಟ ನಿನ್ನನ್ನು ಎಷ್ಟೊಂದು ಜನ ಗೋಪಿಕೆಯರು ನೆನಪಿಸಿಕೊಳ್ಳುತ್ತಿದ್ದಾರೆ... ನಿನ್ನ ಜೊತೆ ಇದ್ದರೆ ನಮಗಂತೂ ಒಂದೇ ಒಂದು ಸೀನೂ ಬಾರದು...’ ಎನ್ನುತ್ತಾ ಕೃಷ್ಣನ ಒಂದೊಂದು ಸೀನಿಗೂ ಒಬ್ಬೊಬ್ಬ ಗೋಪಿಕೆಯ ಹೆಸರನ್ನು ಹೇಳುತ್ತಾ ಹೋಗುತ್ತಿದ್ದರು. ಆದರೂ ಮೂಗಿದ್ದರೆ ನೆಗಡಿಯಿರುವುದು ಎನ್ನುವುದಕ್ಕಿಂತ ನೆಗಡಿಯಿದ್ದರೆ ಮೂಗಿರುವುದು ಎನ್ನುವುದು ಸರಿಯಾಗಬಹುದೇನೋ. ನೆಗಡಿಯಾದಾಗ ತಾನೇ ನಮಗೆ ಮೂಗಿನ ನೆನಪಾಗುವುದು?

ನಿಮಗೆ ‘ಪಿನೋಕಿಯೋ ಇಫೆಕ್ಟ್’ ಗೊತ್ತೇ? ಪಿನೋಕಿಯೋನ ಪ್ರತಿಯೊಂದು ಸುಳ್ಳಿಗೂ ಅವನ ಮೂಗು ಬೆಳೆಯುತ್ತಾ ಹೋಗುತ್ತದೆ. ಕೊನೆಗೊಮ್ಮೆ ಕೋಣೆಯಿಂದ ಹೊರಬರಲಾರದಷ್ಟು.